## ಚೂಯಿಂಗ್ ಗಮ್



ಒಂದು ಚೂಯಿಂಗ್ ಗಮ್ಮನ್ನು ಅತಿ ಹೆಚ್ಚು ಹೊತ್ತು ನಿರಂತರವಾಗಿ ಜಗಿದವರಿಗೆ ಭಾರೀ ಬಹುಮಾನ ಘೋಷಿಸಲಾಗಿತ್ತು. ಬಂದವರೆಲ್ಲ ಸೋತು ಹೋದರು. ಒಬ್ಬ ವ್ಯಕ್ತಿ ಮಾತ್ರ ಎರಡು ದಿನ ಕಳೆದರೂ ಜಗಿಯುವುದನ್ನು ನಿಲ್ಲಿಸಿರಲಿಲ್ಲ. ಆಯೋಜಕರು ಅವನನ್ನೇ ಗೆದ್ದವನೆಂದು ಘೋಷಿಸಿ, 'ನಿಮ್ಮ ಈ ಸಾಧನೆಯ ಗುಟ್ಟು ಏನು ಅಂತ ಹೇಳುತ್ತೀರಾ?' ಎಂದು ಕೇಳಿದರು.

'ಗುಟ್ಟೇನಿಲ್ಲ. ನಾನು ಖಾಸಗಿ ಸುದ್ದಿ ವಾಹಿನಿಯಲ್ಲಿ ವಾರ್ತಾ ವಾಚಕನಾಗಿದ್ದೆ. ಒಂದೇ ಸುದ್ದಿಯನ್ನು ಹೇಳುತ್ತಲೇ ಇರುವ ಕಲೆಯೇ ನನಗೆ ಇದಕ್ಕೆ ಪ್ರೇರಕ' ಎಂದು ಹೇಳಿದ ಗೆದ್ದವನು ಮುಗುಳ್ನಗುತ್ತ.

**ಪ. ರಾಮಕೃಷ್ಣ ಶಾಸ್ತ್ರಿ**

## ಹೆಂಡತಿ ಮಾತು

ದಡ್ಡ ಶಿಖಾಮಣಿ ಗುಂಡನಿಗೆ ಮದುವೆಯಾದಾಗ ಸ್ನೇಹಿತರ ಕಡೆಯಿಂದ ಬೋಧನೆಯಾಗಿತ್ತು. ಹೆಂಡತಿ ಏನೇ ಮಾಡಿದರೂ ಕೊಂಕು ತೆಗೆಯಲೇ ಬೇಕು. ಹಾಗಿದ್ದರೆ ಮಾತ್ರ. ಆಕೆಯನ್ನು ಹದ್ದುಬಸ್ತಿನಲ್ಲಿಡಲು ಸಾಧ್ಯ ಎಂಬ ಉಪದೇಶ ಗೆಳೆಯರಿಂದ ಅವನಿಗೆ ಸಿಕ್ಕಿತ್ತು.

ಸರಿ, ಮದುವೆಯಾಗಿ ತಿಂಗಳು ಕಳೆದಿತ್ತು. ಗೆಳೆಯರ ಕಿವಿಮಾತನ್ನು ಅಕ್ಷರಶಃ ಪಾಲಿಸಿದ್ದ ಗುಂಡ. ಗುಂಡಿಯೂ ತಗ್ಗಿ ಬಗ್ಗಿ ನಡೆದಿದ್ದಳು. ಅದೊಂದು ದಿನ ಬೆಳಿಗ್ಗೆ ಬಿಸಿ ಬಿಸಿ ಗರಿ ಗರಿ ದೋಸೆ ತಯಾರಿಸಿ ಗುಂಡನಿಗೆ ತಿನ್ನಲು ಕೊಟ್ಟಳು.

ಗುಂಡ: 'ನಮ್ಮಮ್ಮ ಮಾಡೋ ದೋಸೆ ಏನ್ ರುಚಿ, ಅದೇನ್ ಘಮ! ಆ ರುಚಿಯ ಹತ್ತಿರಕ್ಕೂ ಬಂದಿಲ್ವಲ್ಲೇ ನೀ ಮಾಡಿದ್ದು... ಇದಕ್ಕೆ ದೋಸೆ ಅಂತಾರಾ?' ಎಂದ.



ಅದಕ್ಕವಳು ಥಟ್ಟನೆ ಉತ್ತರಿಸಿದಳು: 'ನಿಮ್ಮಪ್ಪನ ತರಹ ದೋಸೆ ಹಿಟ್ಟು ರುಬ್ಬಿಕೊಡಿ. ನಿಮ್ಮಮ್ಮ ಮಾಡೋ ತರಹದ್ದೇ ದೋಸೆ ಮಾಡಿಕೊಡ್ತೀನಿ!' ಎಂದಳು! ಅವಳಿಗೆ ಅದೇನ್ ಭೂತ ಮೆಟ್ಟಿಕೊಂಡಿತೋ ಏನೋ, ಮೌನವಾಗಿ ತಿನ್ನುತ್ತ ಇನ್ನು ಮೇಲೆ ಅವಳ ತಂಟೆಗೆ ಹೋಗದಿರುವುದೇ ಉತ್ತಮ ಎಂದು ಗುಂಡ ಅಂದೇ ಪ್ರತಿಜ್ಞೆ ಮಾಡಿದ!

**ಲತಾ ಹೆಗಡೆ, ಹುಬ್ಬಳ್ಳಿ**